ಬಿದಿರುಬೊಂಬಿನ ತೆಪ್ಪಕಟ್ಟಲು ಬರುವಂತೆ ಏಳೆಂಟು ಜನರಿಗೆ ಹೇಳಿ ಕಳಿಸಿದರೂ ಬಂದವರು ಮೂವರೇ. ಅವರೂ ಚೇರ್ಮನ್ನರ ಋಣದಲ್ಲಿದ್ದವರು. 'ತೆಪ್ಪ ಕಟ್ಟಿಕೊಡ್ತೀವಿ, ಆದ್ರೆ ಅದ್ರಲ್ಲಿ ಕುಂತು ಹೆಣಗಳ ಹತ್ರಕ್ಕೆ ಹೋಗು ಅಮ್ತ ಹೇಳಬ್ಯಾಡ್ರಿ' ಅಂತ ಅವರು ಮೊದಲೇ ಹೇಳಿಬಿಟ್ಟರು. 'ಸಂಬಳದಾಳುಗಳನ್ನು ತೆಪ್ಪದಲ್ಲಿ ಕಳಿಸಬೌದಲ್ಲ' ಅಂತ ಚೇರ್ಮನ್ನರ ಪರಿವಾರದವನೊಬ್ಬ ಸಲಹೆ ಕೊಟ್ಟ. ತೆಪ್ಪ ಕಟ್ಟುತ್ತಿದ್ದ ತಿಮ್ಮರಾಯಿ ಚೇರ್ಮನ್ನರ ಮುಖ ನೋಡುತ್ತ, 'ತೆಪ್ಪದಲ್ಲಿ ಹೋಗು ಅಂತ ನಂಗೆ ಹೇಳಬ್ಯಾಡ್ರಿ ಅಣ್ಣಯ್ಯ' ಅಂದು ಬಿಟ್ಟ.

ಹೆಣಗಳನ್ನು ಎತ್ತುವುದು ಊರವರ ಕೆಲಸ ಅಲ್ಲ. ಪ್ರಥಮ ಪ್ರಜೆಯಾದ ನನ್ನ ಕೆಲಸವೂ ಅಲ್ಲ. ಅದು ಸರ್ಕಾರದ ಜವಾಬುದಾರಿ. ಅದಕ್ಕಂತಲೇ ಪೊಲೀಸರು ಇರೋದು. ಅವರೇ ಏನಾದರೂ ಮಾಡಿಕೊಳ್ಳಲಿ. ಅವರೇ ತೆಪ್ಪದಲ್ಲಿ ಹೋಗಿ ಬರಲಿ ಅಂತ ಸಿಐಗೆ ಸ್ಪಷ್ಟವಾಗಿ ಹೇಳಿಬಿಡಬೇಕು ಅಂತ ಚೇರ್ಮನ್ನರು ನಿಶ್ಚಯಿಸಿಕೊಂಡರು.

★★★

ದೇವರ ಕೆರೆಯಲ್ಲಿ ಹೆಣಗಳು ಬಿದ್ದು ತೇಲುತ್ತಿರುವುದು ಹೋಬಳಿಯ ಹದಿನೆಂಟು ಊರುಗಳಲ್ಲಿ ಸುದ್ದಿಯಾಗಿ ಬಿಟ್ಟಿತು. ಕೆರೆಗೆ ಬಿದ್ದಿರುವ ಹೆಂಗಸು, ಮಗು ಯಾರು ಎನ್ನುವ ಕುತೂಹಲ ಎಲ್ಲರಿಗೂ. ಇನ್ನು ಕೆಲವರಿಗೆ ಹೆಣ ಹೆಂಗೆ ಎತ್ತುತ್ತಾರೆ ಅನ್ನೋದನ್ನು ನೋಡುವ ಬಯಕೆ. ಅಂಥವರೆಲ್ಲ ಬೆಳಿಗ್ಗೆ ಎಂಟರ ಹೊತ್ತಿಗೆ ಸ್ಕೂಟರು, ಬೈಕು, ಸೈಕಲ್‌ಗಳನ್ನು ಹತ್ತಿ ಹೊರಟು ಕೆರೆಯ ಬಳಿ ಬಂದರು. ಹತ್ತು ಗಂಟೆ ಹೊತ್ತಿಗೆ ಏರಿಯ ಮೇಲೆ ಎರಡು ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು. ಅವರು ಕೆರೆಯ ಹತ್ತಿರಕ್ಕೆ ಹೋಗದಂತೆ, ನೀರಿಗೆ ಇಳಿಯದಂತೆ ನೋಡಿಕೊಳ್ಳುವಷ್ಟರಲ್ಲಿ ಇಬ್ಬರೂ ಎಚ್ಚೆಗಳಿಗೆ ಸಾಕೆನಿಸಿತು.

ಜನ ತಲೆಗೊಂದು ಮಾತು ಆಡುತ್ತಿದ್ದರು. 'ಹೆಣಗಳು ಬಿದ್ದು ಮೂರು ದಿನಗಳಾದ್ವು, ಅವನ್ನು ಹೊರಕ್ಕೆಳೆದು ಹಾಕೊ ಯೋಗ್ಯತೆ ಈ ಸರ್ಕಾರಕ್ಕೆ ಇಲ್ಲ... ಎಂಎಲ್ಲೆ, ತಹಶೀಲ್ದಾರ್‌ಗೆ ಏನು ದೊಡ್ಡ ರೋಗ ಬಡಕೊಂಡಿದೆಯೊ... ಒಬ್ಬನೂ ಇತ್ತ ಸುಳಿದಿಲ್ಲ. ಎಂಥಾ ಕಾಲ ಬಂತು ನೋಡ್ರಯ್ಯ. ಅಯೋಗ್ಯರ ಕೈಗೆ ಅಧಿಕಾರ ಸಿಕ್ಕರೆ ಹಿಂಗೇ ಆಗದು. ಸರ್ಕಾರ ಬದುಕಿದೆ ಅಂತ ಯಾರಿಗಾದ್ರೂ ಅನ್ನುತ್ತಾ...' ಹೀಗೆ ಒಬ್ಬೊಬ್ಬರು ಒಂದೊಂದು ಮಾತು ಆಡುತ್ತಲೇ ಇದ್ದರು.

ಮುಂಜಾನೆ ಡಾಕ್ಟರ ಜತೆ ಬರುವುದಾಗಿ ಹೇಳಿ ಹೋಗಿದ್ದ ಮಾರ್ಕ್ ಸಾಹೇಬರು ಒಂಬತ್ತೂವರೆಯಾದರೂ ಪತ್ತೆ ಇಲ್ಲ! ಪೊಲೀಸ್ ಜೀಪು ಬರುವ ದಾರಿಯನ್ನೂ, ಕೆರೆಯ ಮಧ್ಯದಲ್ಲಿ ತೇಲುತ್ತಿರುವ ಬಣ್ಣದ ಸೀರೆ ಉಟ್ಟ ಹೆಂಗಸಿನ ಹೆಣವನ್ನೂ ಆಗಾಗ ಕಣ್ಣು ಕೀಲಿಸಿಕೊಂಡು ನೋಡುತ್ತ ಗುಂಪು ನಿಂತುಬಿಟ್ಟಿತು. ನಿಂತು ಸಾಕಾದವರು ಅಲ್ಲಲ್ಲೇ ಕೂತು ಬಿಟ್ಟರು.

ಗಂಗಮ್ಮನ ಪೂಜೆಗಾಗಿ ಬರುವವರ ಅನುಕೂಲಕ್ಕಾಗಿ ನಿರ್ಮಿಸಿದ್ದ ಮೆಟ್ಟಿಲುಗಳ ಬಳಿ ಬಿದಿರುಬೊಂಬುಗಳನ್ನು ಜೋಡಿಸಿ ಕಟ್ಟಿ ಮಾಡಿದ್ದ ಎರಡು ತೆಪ್ಪಗಳನ್ನು ಇಟ್ಟಿದ್ದರು. ಬಿಸಿಲು ಏರುತ್ತಿತ್ತು. ಹೆಣ ಎತ್ತುವುದನ್ನು ನೋಡಲು ಬಂದವರು ಬಿಸಿಲಝಳಕ್ಕೆ ಬಸವಳಿದಿದ್ದರು. ಎಲ್ಲಿಗೂ ಬಾಯಾರಿಕೆ. ಸುತ್ತ ಎಲ್ಲಿಯೂ ಒಂದು ಬೊಗಸೆಯಷ್ಟೂ ನೀರಿಲ್ಲ. ಕೆರೆಯಲ್ಲಿ ಬೇಕಾದಷ್ಟು ನೀರಿದೆ. ಆದರೆ ಕುಡಿಯುವಂತಿಲ್ಲ. ನೀರು ಕುಡಿಯಲೆಂದು ಕೆಲವರು ಕೂಗಳತೆ ದೂರದ ಪಾಳ್ಯದ ಕಡೆಗೆ ಹೋದರು.

ಮಾರ್ಕ್ ಸಾಹೇಬರು ಬಂದಾಗ ಹನ್ನೊಂದು ಗಂಟೆ ದಾಟಿತ್ತು. 'ಅಬ್ಬಿನಳ್ಳಿ ಕ್ರಾಸ್ ಹತ್ರ, ಹೊಲದಾಗ ಒಂದ್ ಹೆಣ ಬಿದ್ದಿತ್ರಿ... ಆ ಹೆಣದ ಕೊರೊನಾ ಟೆಸ್ಟ್ ಮಾಡಿಸಲು ಹಿರಿಯೂರು ಆಸ್ಪತ್ರೆಗೆ ಬಾಡೀನ ಕಳ್ಸಿ ಬರೋಕೆ ಇಷ್ಟೊತ್ತಾತು...' ಅಂತ ಎದುರು ಬಂದು ನಿಂತ ಎಚ್ಚೆಗಳ ಮುಖ ನೋಡುತ್ತ ಮಾರ್ಕ್ ಸಾಹೇಬರು ಹೇಳುತ್ತ ಬರೋದು ತಡವಾದುದಕ್ಕೆ ಪರೋಕ್ಷವಾಗಿ ಕಾರಣ